

## ಕಣ್ಮರೆಯಾದ ಬೆತ್ತದ ಬುಟ್ಟಿಗಳು

ಹಿಂದೆ ಮಲೆನಾಡಿನ ಕೃಷಿ ಬದುಕಿನ ಸಲಕರಣೆಗಳಲ್ಲಿ ಬೆತ್ತದ ಬುಟ್ಟಿಗಳು ಕಾಣುತ್ತಿದ್ದವು. ಈ ಭಾಗದ ಪ್ರತಿಯೊಬ್ಬರ ಮನೆಗಳಲ್ಲೂ ಇವು ಕಂಡುಬರುತ್ತಿದ್ದವು. ಅಡಿಕೆ ಕೊಯ್ಲಿಗೆ ಈ ಬುಟ್ಟಿಗಳು ಅತ್ಯವಶ್ಯಕವಾಗಿದ್ದವು. ಆದರೆ, ಈಗೀಗ ಇವುಗಳು ಕಾಣಿಸುವುದೇ ಕಡಿಮೆಯಾಗಿದೆ. ಪ್ಲಾಸ್ಟಿಕ್ ಬುಟ್ಟಿಗಳು ಬಂದ ಮೇಲೆ ಬೆತ್ತದ ಬುಟ್ಟಿಗಳು ಕಣ್ಮರೆಯಾಗಿವೆ. ಮಲೆನಾಡಿನ ಹಲವು ಮನೆಗಳಲ್ಲಿಂದು ಈ ಬುಟ್ಟಿಗಳೂ ಅಪರೂಪವಾಗಿವೆ. ಕೆಲವರ ಮನೆಗಳಲ್ಲಂತೂ ಬುಟ್ಟಿಗಳು ಅಟ್ಟ ಸೇರಿವೆ. ಇನ್ನೂ ಕೆಲವರು ಬಳಸುತ್ತಿದ್ದಾರೆ.

—ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ



## ಕಲಾತ್ಮಕ ಕಲ್ಲು ಬಾಗಿಲು

ಚಿತ್ರದುರ್ಗದ ಮೇಲುದುರ್ಗವು ಶಿಲ್ಪಕಲೆಗಳ ಆಗರ. ಹುಡುಕುತ್ತಾ ಹೋದರೆ ಹೊಸ ಹೊಸ ಶಿಲ್ಪಗಳು ಅನಾವರಣಗೊಳ್ಳುತ್ತವೆ. ಹೀಗಾಗಿಯೇ, ಚಿತ್ರದುರ್ಗವನ್ನು 2ನೇ ಹಂಪಿ ಎಂದು ಕರೆಯಲಾಗುತ್ತದೆ. ಒಡಲೊಳಗೆ ಅಗಣಿತ ಸ್ಮಾರಕಗಳನ್ನು ಮುಚ್ಚಿಟ್ಟಿಕೊಂಡಿರುವ ಈ ನಾಡು ಉತ್ಖನನಕ್ಕೆ ಹೇಳಿ ಮಾಡಿಸಿದ ಜಾಗ. ಈ ಚಿತ್ರದಲ್ಲಿ ಕಾಣುತ್ತಿರುವ ಕುಸುರಿ ಕೆಲಸದ ಅಪರೂಪದ ಕಲ್ಲಿನ ಬಾಗಿಲುಗಳು ಕಂಡುಬಂದಿದ್ದು, ಸಂಪಿಗೆ ಸಿದ್ದೇಶ್ವರ ದೇವಾಲಯದಲ್ಲಿ. ದೇಗುಲದ ದ್ವಾರ ಮಂಟಪದ ಬಲಭಾಗಕ್ಕೆ ಈ ಕಂಬಗಳು ಹೊಂದಿಕೊಂಡಿವೆ. ವಿಜಯನಗರ ಸಾಮ್ರಾಜ್ಯದ ಒಂದನೇ ಅರಸು ಬುಕ್ಕರಾಯನ ಕಾಲದಲ್ಲಿ ಈ ದೇಗುಲ ನಿರ್ಮಾಣವಾಗಿದೆ ಎನ್ನಲಾಗುತ್ತದೆ. ಈ ದೇಗುಲದ ಒಳಗೆ ಯಾವುದೇ ದೇವರ ಪ್ರತಿಷ್ಠಾಪನೆ ಮಾಡದಿರುವುದೂ ವಿಶೇಷವಾಗಿ ಕಾಣುತ್ತದೆ. ಕುಸುರಿ ಕೆಲಸದ ಸುಂದರ ಬಳ್ಳಿಗಳು, ಮನಮೋಹಕ ಕಂಬಗಳು, ಕೆಳಗಡೆ ಧ್ಯಾನಾಸಕ್ತ ಮುನಿಗಳು ಎರಡು ಸ್ತ್ರೀ ಚಿತ್ರಗಳು ಆಕರ್ಷಣೀಯವಾಗಿವೆ. ಇದರ ಬಗ್ಗೆ ಸಂಶೋಧಕರು ವಿವರಣೆ ಕೊಡಬಲ್ಲರೇ?

—ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ

